ಕರ್ನಾಟಕ ಸರ್ಕಾರ

**ಕಾಲೇಜು ಶಿಕ್ಷಣ ಇಲಾಖೆ**

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಉನ್ನತ ಶಿಕ್ಷಣ ಸೌಧ, ಶೇಷಾದ್ರಿರಸ್ತೆ,
ಬೆಂಗಳೂರು, ದಿನಾಂಕ:01.01.2022.

ಸಂಖ್ಯೆ: ಕಾಶಿಇ/ಶೈವಿ/100/ಸ್ವಾ.ವಿಜ/2021-22

# ಸುತ್ತೋಲೆ

ವಿಷಯ: ಸ್ವಾಮಿ ವಿವೇಕಾನಂದರ ಜನ್ಮ ದಿನಾಚರಣೆಯ ಅಂಗವಾಗಿ ರಾಷ್ಟ್ರೀಯ ಯುವ ಸಪ್ತಾಹವನ್ನು ಆಚರಿಸುವ ಬಗ್ಗೆ.

ಉಲ್ಲೇಖ: ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ರವರ ಅರೆ ಸರ್ಕಾರಿ ಪತ್ರ ಸಂಖ್ಯೆ:ಯುಸಕ್ರೀ 212 ಅಮುಕಾ 2021 ದಿನಾಂಕ:18.12.2021.

* * * * * *

ರಾಷ್ಟ್ರ ಕಂಡ ಮಹಾನ್ ದಾರ್ಶನಿಕ, ತತ್ವಶಾಸ್ತ್ರಜ್ಞ, ಚಿಂತಕ, ವೀರ ಸನ್ಯಾಸಿ, ಸ್ವಾಮಿ ವಿವೇಕಾನಂದರ ಜನ್ಮ ದಿನವಾದ ಜನವರಿ 12 ರಂದು ಪ್ರತಿ ವರ್ಷ ಯುವ ಜನೋತ್ಸವ ಕಾರ್ಯಕ್ರಮವನ್ನು ಆಚರಿಸಲಾಗುತ್ತಿದೆ. ಈ ವರ್ಷ ಸ್ವಾಮಿ ವಿವೇಕಾನಂದರ ಜನ್ಮ ದಿನಾಚರಣೆಯ ಹಾಗೂ ಅಜಾದಿ ಕಾ ಅಮೃತ ಮಹೋತ್ಸವದ ಅಂಗವಾಗಿ ನಮ್ಮ ಯುವ ಪೀಳಿಗೆಯ ಸರ್ವಾಂಗೀಣ ಬೆಳವಣಿಗೆ ಹಾಗೂ ಉತ್ತೇಜಿಸುವ ಉದ್ದೇಶದಿಂದ ಜನವರಿ 12 ರಿಂದ 18ನೇ ಜನವರಿ 2022ರವರೆಗೆ ರಾಜ್ಯಾದಾದ್ಯಂತ **"ಯುವ ಸಪ್ತಾಹವನ್ನು"** ಆಚರಿಸಲಾಗುತ್ತಿದೆ.

ರಾಷ್ಟ್ರಿಯತೆ, ದೇಶಭಕ್ತಿ ಹಾಗೂ ಭಾರತೀಯರ ಜೀವನದಲ್ಲಿ ಅದರಲ್ಲೂ ವಿಶೇಷವಾಗಿ ಸ್ವಾಮಿ ವಿವೇಕಾನಂದರ ಗುರಿಯಾಗಿದ್ದ, ಯುವ ಜನಾಂಗದಲ್ಲಿ ದೇಶ ಕಟ್ಟುವ, ದೇಶದ ಭವಿಷ್ಯವನ್ನು ಉಜ್ವಲವಾಗಿ ರೂಪಿಸುವ, ಒಡೆದ ಮನಸ್ಸುಗಳಿಗೆ ಭಾವೈಕ್ಯದ ಬೆಸುಗೆ ಹಾಕುವ ಅದ್ಭುತ ಸಾಮರ್ಥ್ಯ ಇರುವ ಯುವಶಕ್ತಿಗೆ ಈ ದೇಶದ ಭವ್ಯ ಇತಿಹಾಸ, ಪರಂಪರೆ, ಸಂಸ್ಕೃತಿಗಳ ವಿಚಾರದಲ್ಲಿ ಹೆಮ್ಮೆಪಡುತ್ತಲೇ ವಿದ್ಯಾರ್ಥಿಗಳು ತಮ್ಮ ವರ್ತಮಾನದ ಕರ್ತವ್ಯದ ಬಗ್ಗೆ ಆಲೋಚನೆ ಮಾಡುವಂತೆ ಹಾಗೂ ಕಾರ್ಯ ಪ್ರವೃತ್ತರಾಗುವಂತೆ ಸ್ವಾಮಿ ವಿವೇಕಾನಂದರು ಬೋಧಿಸಿರುವ ಮೌಲ್ಯಗಳನ್ನು ರಾಜ್ಯಾದಾದ್ಯಂತ ಕಾಲೇಜು ವಿದ್ಯಾರ್ಥಿಗಳು ಮತ್ತು ಯುವ ಜನತೆಗೆ ಸ್ಫೂರ್ತಿಯ ಸಂದೇಶವನ್ನು ನೀಡುವ ನಿಟ್ಟಿನಲ್ಲಿ **"ಯುವ ಸಪ್ತಾಹ"** ಕಾರ್ಯಕ್ರಮವನ್ನು ರಾಜ್ಯದ ಎಲ್ಲಾ ಸರ್ಕಾರಿ ಹಾಗೂ ಖಾಸಗಿ ಅನುದಾನಿತ ಪ್ರಥಮ ದರ್ಜೆ ಕಾಲೇಜುಗಳಲ್ಲಿ **ದಿನಾಂಕ:12.01.2022 ರಿಂದ 18.01.2022 ರವರೆಗೆ ಈ ಸುತ್ತೋಲೆಯೊಂದಿಗೆ ಲಗತ್ತಿಸಿರುವ ಕಾರ್ಯಕ್ರಮದ ಪಟ್ಟಿಯಂತೆ ಪ್ರತಿ ದಿನ ವಿವಿಧ ಇಲಾಖೆಗಳ ಸಹಯೋಗದೊಂದಿಗೆ** ಅರ್ಥಪೂರ್ಣವಾಗಿ ಆಚರಿಸಲು ಸೂಚಿಸಲಾಗಿದೆ.

ಮುಂದುವರೆದು ಕಾಲೇಜು ಹಂತದ ಕಾರ್ಯಕ್ರಮ ಪಟ್ಟಿ ಹಾಗೂ ಕೈಗೊಂಡ ಕ್ರಮದ ಕ್ರೂಢೀಕೃತ ವರದಿಯನ್ನು ಇ-ಮೇಲ್ ವಿಳಾಸ: dce.vivekanandajayanti@gmail.com ಹಾಗೂ dyesdept@gmail.com ಮತ್ತು ಸಂಬಂಧಪಟ್ಟ ಪ್ರಾದೇಶಿಕ ಜಂಟಿ ನಿರ್ದೇಶಕರ ಇ-ಮೇಲ್ ವಿಳಾಸಕ್ಕೆ ಕಳುಹಿಸುವಂತೆ ಸೂಚಿಸಲಾಗಿದೆ.

ಅಡಕ: ಕಾರ್ಯಕ್ರಮದ ಪಟ್ಟಿ.

**(ಆಯುಕ್ತರ ಆದೇಶದ ಮೇರೆಗೆ)**

1/1/22

**ಕಾಲೇಜು ಶಿಕ್ಷಣ ನಿರ್ದೇಶಕರು**

ಇವರಿಗೆ:

1. ರಾಜ್ಯದ ಎಲ್ಲಾ ಸರ್ಕಾರಿ ಹಾಗೂ ಖಾಸಗಿ ಅನುದಾನಿತ ಕಾಲೇಜುಗಳ ಪ್ರಾಂಶುಪಾಲರುಗಳಿಗೆ – ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ.

2. **ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಪ್ರಾದೇಶಿಕ ಕಛೇರಿ, ಬೆಂಗಳೂರು, ಮೈಸೂರು, ಶಿವಮೊಗ್ಗ, ಮಂಗಳೂರು, ಧಾರವಾಡ, ಕಲಬುರಗಿ. – ತಮ್ಮ ವ್ಯಾಪ್ತಿಯ ಕಾಲೇಜುಗಳ ಕಾರ್ಯಕ್ರಮದ ಪಟ್ಟಿಯನ್ನು ಸಿದ್ಧಗೊಳಿಸಲು ಸಮನ್ವಯ ಸಾಧಿಸಿ, ಜಿಲ್ಲಾವಾರು ವರದಿಯನ್ನು ಕ್ರೂಡೀಕರಿಸಿ ಮಾಹಿತಿಯನ್ನು ಈ ಕಛೇರಿಗೆ ಸಲ್ಲಿಸುವಂತೆ ಸೂಚಿಸಲಾಗಿದೆ.**
3. ಮಾಹಿತಿ ತಂತ್ರಜ್ಞಾನ ಅಧಿಕಾರಿಗಳು, ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ, ಬೆಂಗಳೂರು – ಇಲಾಖಾ ವೆಬ್‌ಸೈಟ್‌ನಲ್ಲಿ ಅಳವಡಿಸಲು ತಿಳಿಸಲಾಗಿದೆ.

<u>ಪ್ರತಿಯನ್ನು:</u>

1. ಮಾನ್ಯ ಉನ್ನತ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿಗಳ ಶಾಖೆಗೆ, ಕೊಠಡಿ ಸಂಖ್ಯೆ: 242 2ನೇ ಮಹಡಿ, ವಿಕಾಸಸೌಧ, ಬೆಂಗಳೂರು – 560 001.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳ ಆಪ್ತಶಾಖೆಗೆ, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ) ಬಹುಮಹಡಿಗಳ ಕಟ್ಟಡ, ಬೆಂಗಳೂರು – 560 001.
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳ ಆಪ್ತಶಾಖೆಗೆ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, 2ನೇ ಮಹಡಿ, 2ನೇ ಹಂತ, ಬಹುಮಹಡಿಗಳ ಕಟ್ಟಡ, ಬೆಂಗಳೂರು–560 001.
4. ಆಯುಕ್ತರು, ನಿರ್ದೇಶಕರು, ಹೆಚ್ಚುವರಿ ನಿರ್ದೇಶಕರು, ಮುಖ್ಯ ಆಡಳಿತಾಧಿಕಾರಿಗಳು, ಜಂಟಿ ನಿರ್ದೇಶಕರ ಆಪ್ತಶಾಖೆ, ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ, ಬೆಂಗಳೂರು – 560 001.
5. ಕಛೇರಿ ಪ್ರತಿ.

# ಕಾರ್ಯಕ್ರಮದ ಪಟ್ಟಿ

| ಕ್ರ.ಸಂ | ದಿನಾಂಕ | ಕಾರ್ಯಕ್ರಮ | ಇಲಾಖೆಗಳು | ನೋಡಲ್ ಅಧಿಕಾರಿಯ ವಿವರ/ ಸರ್ಕಾರೇತರ ಸಂಸ್ಥೆಯ ವಿವರ |
|---|---|---|---|---|
| 01 | 12-01-22 | ಸ್ವಾಮಿ ವಿವೇಕಾನಂದರ ವಿಚಾರಧಾರೆ, ಧ್ಯೇಯೋದ್ದೇಶಗಳು, ತತ್ವ ಆದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳುವ ಸಲುವಾಗಿ ವಿಚಾರ-ಸಂಕಿರಣ/ ಪ್ರಬಂಧ/ಆಶುಭಾಷಣ ಸ್ಪರ್ಧೆ ನಡೆಸುವ ಮೂಲಕ ಯಾವ **ಮೌಲ್ಯಗಳನ್ನು ಯುವ ಜನರಲ್ಲಿ ಅಳವಡಿಸಿಕೊಳ್ಳುವ ಕುರಿತು** ಗ್ರಾಮ ಮಟ್ಟದಿಂದ ರಾಜ್ಯ ಮಟ್ಟದವರೆಗೂ ಕ್ರಿಯಾ ಯೋಜನೆಯನ್ನು ತಯಾರಿಸುವುದು.<br><br>ಸ್ಥಳೀಯ ಜನಪದ ಹಾಗೂ ಯುವ ಪ್ರತಿಭೆಯನ್ನು ಗುರುತಿಸಿ, **ರಾಷ್ಟ್ರೀಯ ಏಕೀಕರಣ** ವಿಷಯದ ಕುರಿತು ಹಾಡು, ನಾಟಕ ಇತ್ಯಾದಿ ಮೂಲಕ ಸಾಂಸ್ಕೃತಿಕ ಕಾರ್ಯಕ್ರಮವನ್ನು ಆಯೋಜಿಸುವುದು. | 1. ಉನ್ನತ ಶಿಕ್ಷಣ ಇಲಾಖೆ<br>2. ಆರ್.ಡಿ.ಪಿಆರ್ ಇಲಾಖೆ<br>3. ನಗರಾಭಿವೃದ್ಧಿ ಇಲಾಖೆ<br>4. ವಾರ್ತಾ ಇಲಾಖೆ<br><br>5. ಕನ್ನಡ ಮತ್ತು ಸಂಸ್ಕೃತಿ ಇಲಾಖೆ | 1. ಸರ್ಕಾರೇತರ ಸಂಘ ಸಂಸ್ಥೆಗಳು<br>2. ಯುವ ಕ್ಲಬ್‌ಗಳು |
| 02 | 13-01-22 | 75ನೇ ಸ್ವಾತಂತ್ರ್ಯ ಮಹೋತ್ಸವದ ಅಂಗವಾಗಿ ಎಲ್ಲಾ ಶಾಲಾ ಕಾಲೇಜುಗಳಲ್ಲಿ **"ಯುವ ಸಂಸದ್" ಮತ್ತು ಗ್ರಾಮ ಮಟ್ಟದಲ್ಲಿ :ಗ್ರಾಮ ಸಭೆ"** ಗಳನ್ನು ವಿಶೇಷವಾಗಿ ವಿಕಲಚೇತನರನ್ನು ಒಳಗೊಂಡಂತೆ ಏರ್ಪಡಿಸುವುದು.<br><br>ಯುವಕರನ್ನು ಪ್ರಜಾಪ್ರಭುತ್ವದಲ್ಲಿ ತೊಡಗಿಸುವ ಕುರಿತು, ನಿರುದ್ಯೋಗ ನಿವಾರಣೆ, ಸ್ವಯಂ ಉದ್ಯೋಗದ ಹಾದಿಗೆ ಯುವಕ ಯುವತಿಯರನ್ನು ತರಲು ಹಾಗೂ ಯುವ ಜನರಿಂದ | 1. ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ<br><br>2. ಗ್ರಾಮೀಣಾಭಿ ವೃದ್ಧಿ ಮತ್ತು ಪಂ.ರಾಜ್ ಇಲಾಖೆ<br><br>3. ಶಿಕ್ಷಣ ಇಲಾಖೆ | ತಾಲ್ಲೂಕು ಮಟ್ಟದಲ್ಲಿ ಯುವ ಪರಿವರ್ತಕರು<br><br>ಗ್ರಾಮ ಮಟ್ಟದಲ್ಲಿ ಗ್ರಾಮ ಪಂಚಾಯ್ತಿ ಅಧಿಕಾರಿಗಳು.<br><br>ಜಿಲ್ಲಾ ಮಟ್ಟದಲ್ಲಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರು, ನೆಹರು ಯುವ ಕೇಂದ್ರದ ಜಿಲ್ಲಾ ಅಧಿಕಾರಿಗಳು ಮತ್ತು ಎನ್.ಎಸ್.ಎಸ್ |

| | | | | |
|---|---|---|---|---|
| | | ಸಮುದಾಯದ ಅಭಿವೃದ್ಧಿಗಾಗಿ ಕ್ರಿಯಾ ಯೋಜನೆಯನ್ನು ರೂಪಿಸುವುದು. ಯುವ ಜನತೆಯ ಯಶಸ್ಸಿನ ಕಥೆಗಳ ಭಿತ್ತಿಪತ್ರಗಳನ್ನು ತಯಾರಿಸಿ ಡಿಜಿಟಲ್ ವೇದಿಕೆಯಲ್ಲಿ ಅಳವಡಿಸಿ ಶಾಲಾ, ಕಾಲೇಜು, ವಿಶ್ವವಿದ್ಯಾನಿಲಯಗಳಲ್ಲಿರುವ ವೆಬ್‌ಸೈಟ್ https://www.surveymonkey.com/r/WC6DRB2 ಮತ್ತು ಜಾಲತಾಣಗಳಲ್ಲಿ ಪ್ರಚಾರ ನೀಡುವುದು. | 4. ವಾರ್ತಾ ಇಲಾಖೆ | ಸಂಯೋಜನಾಧಿಕಾರಿಗಳು ಹಾಗೂ ಜಿಲ್ಲಾ ಎನ್.ಎಸ್.ಎಸ್ ನೋಡಲ್ ಅಧಿಕಾರಿಗಳು<br><br>ರಾಜ್ಯ ಮಟ್ಟದಲ್ಲಿ ಆಯುಕ್ತರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಮತ್ತು ಜಂಟಿ ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ರಾಜ್ಯ ಎನ್.ಎಸ್.ಎಸ್ ಅಧಿಕಾರಿ ಮತ್ತು ನೆಹರು ಯುವ ಕೇಂದ್ರದ ರಾಜ್ಯದ ನಿರ್ದೇಶಕರು. |
| 03 | 14-01-22 | ಪೌಷ್ಠಿಕತೆಯ ಹಾಗೂ ಆರೋಗ್ಯ ಶಿಬಿರ ಮತ್ತು ರಸ್ತೆ ಸುರಕ್ಷತೆ ಬಗ್ಗೆ ಜಾಗೃತಿ ಮೂಡಿಸಲು ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳುವುದು. | 1. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ<br>2. ನಗರಾಭಿವೃದ್ಧಿ ಇಲಾಖೆ<br>3. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ<br>4 ಸಾರಿಗೆ ಇಲಾಖೆ. | 1.ಶ್ರೀ ರೋಹಿತ್ ಗಂಗಾಧರ್, ಸಹಾಯಕ ನಿರ್ದೇಶಕರು, ಯುಸಕ್ರೀ ಇಲಾಖೆ<br>2. ಡಾ: ರೇಣು ಅಗರ್‌ವಾಲ್, nutritionalist.<br>3. ಶ್ರೀ ಆನಂದ್, ಅನ್ನಪೂರ್ಣ ಸತ್ಯಸಾಯಿ ಟ್ರಸ್ಟ್. |
| 04 | 15-01-22 | **ಕ್ರೀಡಾ ಉತ್ಸವ** ದೇಶೀಯ ಕ್ರೀಡೆ, ಫಿಟ್ ಇಂಡಿಯಾ RUN, ಯೋಗಾಸನ, ಗ್ರಾಮೀಣ ಕ್ರೀಡೆಗಳನ್ನು ಹಮ್ಮಿಕೊಳ್ಳುವುದು.<br><br>ಕ್ರೀಡಾ ವಿಜ್ಞಾನ ಕೇಂದ್ರದ ವತಿಯಿಂದ ತರಬೇತಿ ಪಡೆದಿರುವ ದೈಹಿಕ ಶಿಕ್ಷಣ ಶಿಕ್ಷಕರುಗಳು ಪ್ರಸ್ತುತ ತರಬೇತಿ ಪಡೆಯುತ್ತಿರುವ ಪ್ರಶಿಕ್ಷಣಾರ್ಥಿಗಳಿಗೆ ವೈಜ್ಞಾನಿಕವಾಗಿ ದೈಹಿಕ ಸಾಮರ್ಥ್ಯಕ್ಕೆ ಅನುಗುಣವಾಗಿ ತರಬೇತಿ ನೀಡುವುದು. | 1. ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ<br>2. ಆರ್.ಡಿ.ಪಿ.ಆರ್.<br>3. ನಗರಾಭಿವೃದ್ಧಿ ಇಲಾಖೆ<br>4. ಉನ್ನತ ಶಿಕ್ಷಣ ಇಲಾಖೆ | ಜಂಟಿ ನಿರ್ದೇಶಕರು, ಯುಸಕ್ರೀ ಇಲಾಖೆ (ಕ್ರೀಡೆ)<br><br>ಶ್ರೀ ಅಂತೋಣಿ, ಕ್ರೀಡಾ ವಿಜ್ಞಾನ ಕೇಂದ್ರ. |
| 05 | 16-01-22 | ಮಾದಕ ವಸ್ತು (Drugs Control) ಬಳಕೆ ನಿಯಂತ್ರಣ ಮತ್ತು ಮಹಿಳಾ ದೌರ್ಜನ್ಯ ಹಾಗೂ ಅಪರಾಧ ನಿಷೇಧ ಇತ್ಯಾದಿ | 1. ಒಳಾಡಳಿತ ಇಲಾಖೆ | 1. ಜಂಟಿ ನಿರ್ದೇಶಕರು (ಕ್ರೀಡೆ) |

| | | | | |
|---|---|---|---|---|
| | | ಈ ಸಂಬಂಧ ನಿಮ್ಹಾನ್ಸ್ ಮತ್ತು ಪೊಲೀಸ್ ಇಲಾಖೆಯು ಸಹಯೋಗದೊಂದಿಗೆ sensitization ಕಾರ್ಯಕ್ರಮವನ್ನು ಹಮ್ಮಿಕೊಳ್ಳುವುದು. | 2. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ<br>3. ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಮತ್ತು ವಿಕಲಚೇತನ ಇಲಾಖೆ | 2. ಶ್ರೀ ಪ್ರದೀಪ್, ಪ್ರಾಧ್ಯಾಪಕರು, ನಿಮ್ಹಾನ್ಸ್<br>3. ಶ್ರೀ ರಾಜೇಂದ್ರ ರಾಯ್, ರೋಟರಿ ಕ್ಲಬ್<br>4. ಶ್ರೀ ವೀವಿಯನ್, ಬಿಜಿಎಸ್ |
| 06 | 17-01-22 | ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ವತಿಯಿಂದ "ಕಾನೂನು ಸೇವೆಗಳ" ಕುರಿತು ಪ್ರಚಾರ | 1. ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ.<br>2. ವಾರ್ತಾ ಇಲಾಖೆ | 1. ನೆಹರು ಯುವ ಕೇಂದ್ರದ ರಾಜ್ಯ ನಿರ್ದೇಶಕರು. |
| 07 | 18-01-22 ರಿಂದ | "ಕೌಶಲ್ಯ ಕರ್ನಾಟಕ" ಅಡಿಯಲ್ಲಿ ಸ್ಥಳೀಯ ಯುವ ಜನತೆಯ ಆಸಕ್ತಿ ಹಾಗೂ ಸಾಮರ್ಥ್ಯಕ್ಕೆ ತಕ್ಕಂತೆ ಕೌಶಲ್ಯ ಅಭಿವೃದ್ಧಿ ತರಬೇತಿಯನ್ನು ನೀಡುವುದು. ಸ್ಥಳೀಯ ಘನತ್ಯಾಜ್ಯದ ಮರುಬಳಕೆ, ಪ್ಲಾಸ್ಟಿಕ್ ಪರಿವರ್ತನೆಗೆ ಲಭ್ಯವಿರುವ ತಂತ್ರಜ್ಞಾನ, ಉದ್ಯಮಶೀಲತೆ ಹೂಡಿಕೆ ಕುರಿತು ತರಬೇತಿ ಹಾಗು ಸರ್ಕಾರದ ವಿವಿಧ ಯೋಜನೆಗಳಲ್ಲಿ ಉದ್ಯಮಶೀಲತೆಯನ್ನು ಹೆಚ್ಚಿಸಲು ಎಂಎಸ್ಎಂಇ, ಸ್ವಸಹಾಯ ಗುಂಪುಗಳ ಯೋಜನೆಗಳ ಕುರಿತು ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳುವುದು. | 1. ಕೌಶಲ್ಯಾಭಿವೃದ್ಧಿ ಇಲಾಖೆ<br>2. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ<br>3. ಆರ್.ಡಿ.ಪಿ.ಆರ್<br>4. ನಗರಾಭಿವೃದ್ಧಿ ಇಲಾಖೆ<br>5. ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ<br>6.ಸಮಾಜ ಕಲ್ಯಾಣ ಇಲಾಖೆ<br>7. ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ<br>8. ನಿರ್ದೇಶಕರು, ಎಂಎಸ್ಎಂಇ | 1. ಉಪ ನಿರ್ದೇಶಕರು (ಆಡಳಿತ) ಯುಸಕ್ರೀ ಇಲಾಖೆ.<br>2. ಶ್ರೀಮತಿ ಅನಿತಾ ಪ್ರದೀಪ್, ವಿಷನ್ ಕರ್ನಾಟಕ foundation<br>3. ಕಾರ್ಯದರ್ಶಿ, KASSIA association. |

----------